5. ವರದಿಯನ್ನೊಪ್ಪಿಸುವುದು.

ಶ್ರೀ ಎನ್. ಯೋಗೀಶ್‌ಭಟ್ (ಅಧ್ಯಕ್ಷರು, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ) : ಮಾನ್ಯ ಅಧ್ಯಕ್ಷರೆ, 2005–06ನೇ ಸಾಲಿನ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 23ನೇ ವರದಿಯನ್ನು ಒಪ್ಪಿಸುತ್ತಿದ್ದೇವೆ.

ಅಧ್ಯಕ್ಷರು : ಮಂಡಿಸಲಾಯಿತು.

6. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು.

ವಿಷಯ: ಬೆಂಗಳೂರಿನ ಕುಮಾರಸ್ವಾಮಿ ಬಡಾವಣೆಯಲ್ಲಿನ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ನೋಟೀಸ್‌ನಲ್ಲಿ ಇಲ್ಲದಿದ್ದರೂ ಕೂಡ ಹೇಳಬೇಕಾಗುತ್ತದೆ. ನವೋದಯ ಶಾಲೆ ತುಮಕೂರಿನಲ್ಲಿ ಇದೇ ರೀತಿಯಾದ ಘಟನೆಯು ಕಳೆದ 8–10 ದಿವಸಗಳ ಹಿಂದೆ ನಡೆಯಿತು. ಅಲ್ಲಿ ರೆಸಿಡೆನಿಷಿಯಲ್ ಸ್ಕೂಲ್‌ನಲ್ಲಿರುವಂತಹ ಹೆಣ್ಣುಮಗಳು ಅವರ ಅಪ್ಪನಿಗೆ ಕಾಗದವನ್ನು ಬರೆದಿದೆ, ನಾನು ಇದರಲ್ಲಿ ಶೇಕಡ 50 ಪರ್ಸೆಂಟ್ ಮಾತ್ರ ಬರೆದಿದ್ದೇನೆ. ಈ ಶಾಲೆಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ ಅಪ್ಪ ನಾನು ಸತ್ತು ಹೋಗುತ್ತಿದ್ದೇನೆ ಎಂದು ಕಾಗದ ಬರೆದು ಅಲ್ಲಿಯೇ ಸಾಯುತ್ತಾಳೆ. ಇಲ್ಲಿ ಲೈಂಗಿಕವಾಗಿ 9ನೇ ಕ್ಲಾಸ್‌ನಲ್ಲಿ ಓದುತ್ತಿರುವಂತಹ ಹೆಣ್ಣುಮಗಳನ್ನು ಒಂದು ರೂಮಿಗೆ ಕರೆದು ಬಿಟ್ಟು ಲೈಂಗಿಕ ಚಟುವಟಿಕೆಗೆ ಬಾ ಎಂದು ಏನ್ನುವುದರ ಬಗ್ಗೆ ಆಕೆ ಬಾಯಿ ಬಿಟ್ಟು ಹೇಳಿದರೆ ಅದರ ಬಗ್ಗೆ ರಕ್ಷಣೆಯನ್ನು ಕೊಡುವುದನ್ನು ಬಿಟ್ಟು ಮುಖ್ಯೋಪಾಧ್ಯಾಯಿನಿ ಇವತ್ತು ಇದರ ಬಗ್ಗೆ ಕೇಳುವುದಕ್ಕೆ ಹೋದವರಿಗೆ ಕೆನ್ನೆಗೆ ಹೊಡೆಯುತ್ತಾರೆ. ಈ ಸ್ಥಿತಿಯನ್ನು ಸರ್ಕಾರ ಏನಾದರೂ ನಿಗ್ರಹಿಸುತ್ತದೆಯೇ? ರೆಸಿಡೆನಿಷಿಯಲ್ ಸ್ಕೂಲ್ಸ್ ಮತ್ತು ಹೆಣ್ಣು ಮಕ್ಕಳ ಸ್ಕೂಲ್‌ಗಳನ್ನು ನೀವು ಮುಚ್ಚಿಬಿಡಿ, ಮಾನ, ಮರ್ಯಾದೆ, ಗೌರವ, ಘನತೆಗಳನ್ನು ಕಳೆದುಕೊಂಡು ಅವರು ಈವತ್ತು ಎಲ್ಲಿಗೆ ಹೋಗಬೇಕಾಗಿದೆ ಈ ಶಿಕ್ಷಕರ ಮೇಲೆ ಏನು ಕ್ರಮವನ್ನು ಕೈಗೊಳ್ಳುತ್ತೀರಿ? ಈ ಕುಮಾರಸ್ವಾಮಿ ಲೇಔಟ್‌ನಲ್ಲಿರುವ ಶಾಲೆಯಮೇಲೂ ತೆಗೆದುಕೊಳ್ಳಬೇಕು, ಸರ್ಕಾರಿ ಶಾಲೆ ನವೋದಯ ಶಾಲೆ ಏನಿದೆ ತುಮಕೂರಿನಲ್ಲಿ ಪ್ರಮುಖವಾಗಿ ಅದರ ಮೇಲೆಯೂ ಕ್ರಮವನ್ನು ತೆಗೆದುಕೊಳ್ಳಬೇಕು. ನಾನು ಅದಕ್ಕಾಗಿ ತಮಗೆ ಕೇಳುತ್ತಿರುವುದು. ಇದರ ಬಗ್ಗೆ ಹೆಣ್ಣುಮಕ್ಕಳು ಸ್ಪಷ್ಟವಾಗಿ ಬರೆದಿದ್ದಾರೆ. ನಾನು ಆ ಕಾಗದವನ್ನು ತಂದು ತಮಗೆ ಕೊಡುತ್ತೇನೆ. ಇದರಲ್ಲಿ ಹೇಳಿರುವುದು ಅಲ್ಲಿ ನಡೆಯುತ್ತಿರುವ ಘಟನೆಯಲ್ಲಿ ಶೇಕಡ 50 ಭಾಗ ಮಾತ್ರ ಆ ಶಾಲೆಯಲ್ಲಿರುವ ಕೆಲವು ಶಿಕ್ಷಕರು ಮಕ್ಕಳಿಗೆ ಹೇಳುತ್ತಾರೆ ಏನಾದರೂ ಮಾಡಿ ಯಾರಾದರೂ ಎಂಎಲ್‌ಎ ಅವರನ್ನು ಹಿಡಿದುಕೊಂಡು ಪ್ರಸ್ತಾಪ ಮಾಡಿ ನಾವು ಇದನ್ನು ಕಣ್ಣಾರೆ ನೋಡುವುದಕ್ಕಾಗುವುದಿಲ್ಲ. ಏನ್ನುವಂತಹ ಸ್ಥಿತಿ,